## ________ ವಿದ್ಯುತ್ ಸರಬರಾಜು ಕಂಪನಿ
## ಮತ್ತು
## ಮೈಕ್ರೋ ಫೀಡರ್ ಫ್ರಾಂಚೈಸಿ ನಡುವಿನ ಒಪ್ಪಂದದ ನಿವೇದನ ಪತ್ರ

---

ಈ ನಿವೇದನೆಯನ್ನು ______ ಇಸವಿಯ ______ ತಿಂಗಳ _____ ದಿನಾಂಕದಂದು ಕೆಳಕಂಡ ಪಕ್ಷಕಾರರ ನಡುವೆ ಒಪ್ಪಂದಕ್ಕೊಳಪಡಿಸಲಾಗಿದೆ.

1. ಕರ್ನಾಟಕ ಸರ್ಕಾರದ ಮಾಲೀಕತ್ವದ ಕಂಪನಿ ಅಧಿನಿಯಮಗಳ ಅಡಿಯಲ್ಲಿ ನೋಂದಾಯಿಸಲ್ಪಟ್ಟು __ವಿ.ಕಂ ಎಂದು ಕರೆಯಲ್ಪಡುವ _______ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ______, ಕರ್ನಾಟಕ, ಈ ವಾಕ್ಯವು ಅಗತ್ಯವಿರುವೆಡೆಯಲ್ಲೆಲ್ಲಾ ಈ ಕಂಪನಿಯ ಹಿತದೃಷ್ಟಿಯಿಂದ ಇದರ ಉತ್ತರಾಧಿಕಾರಿಗಳು ಒಬ್ಬ ಪಕ್ಷಕಾರರಾಗಿ

ಹಾಗೂ

2. _________ ಇಲ್ಲಿ ವಾಸವಾಗಿರುವ ಶ್ರೀ. ____________ ಇವರ ಪುತ್ರ ಶ್ರೀ. ___________ ಇವರು ____________ ಗ್ರಾಮ ಪಂಚಾಯಿತಿಯ ಮೈಕ್ರೋ ಫೀಡರ್ ಫ್ರಾಂಚೈಸಿ ಎಂ.ಎಫ್.ಎಫ್ ಎಂದು ಕರೆಯಲ್ಪಡುವ ಮತ್ತೊಬ್ಬ ಪಕ್ಷಕಾರರಾಗಿ.

ಈ ಮುಂದಿನ ಷರತ್ತುಬದ್ಧ ಸಾಕ್ಷಿಗೊಳಪಡಿಸಲಾಗಿದೆ.

____ ವಿದ್ಯುತ್ ಸರಬರಾಜು ಕಂಪನಿಯು ತನ್ನ ಗ್ರಾಹಕರಿಗೆ ಉತ್ತಮ ಸೇವೆಯನ್ನು ನೀಡಲು ಹಾಗೂ ತನ್ನ ವಾಣಿಜ್ಯ ಮತ್ತು ತಾಂತ್ರಿಕ ಕಾರ್ಯಾಚರಣೆಗಳನ್ನು ಉತ್ತಮಪಡಿಸಿಕೊಳ್ಳಲು ಎಂ.ಎಫ್.ಎಫ್ ಗಳ ಸೇವೆಯನ್ನು ಪಡೆದುಕೊಳ್ಳಲು ಉದ್ದೇಶಿಸಿದೆ. ನಿರ್ದಿಷ್ಟ ಗ್ರಾಹಕರ ಸ್ಥಾವರಗಳ ಮಾಪಕ ಓದುವಿಕೆ, ಬಿಲ್ ತಯಾರಿಕೆ, ಬಿಲ್ ವಿತರಣೆ ಹಾಗೂ ನಿಗದಿಪಡಿಸಿರುವ ವ್ಯಾಪ್ತಿಯಲ್ಲಿ ಒಳಪಡುವ ಎಲ್ಲಾ ಎಲ್.ಟಿ ಗ್ರಾಹಕರಿಂದ ವಿದ್ಯುತ್ ಬಿಲ್ ಪಾವತಿಸಿಕೊಳ್ಳುವ ಕಾರ್ಯಗಳಿಗಾಗಿ ಎಂ.ಎಫ್.ಎಫ್ ಗಳನ್ನು ನಿಯೋಜಿಸುವುದು ಈ ಒಪ್ಪಂದದ ಪ್ರಮುಖ ಉದ್ದೇಶವಾಗಿದೆ. ಜೊತೆಗೆ ಆ ವ್ಯಾಪ್ತಿಯಲ್ಲಿ, ಈ ಎಂ.ಎಫ್.ಎಫ್ ಗಳು ಕಂಪನಿಯ ಆರ್ಥಿಕ ಪರಿಸ್ಥಿತಿಯನ್ನು ಸಕಲ ರೀತಿಯಲ್ಲಿ ಅಭಿವೃದ್ಧಿಪಡಿಸಲು ಸಾಧ್ಯವಾಗಿರುವುದು ಕಂಪನಿಯ ಉದ್ದೇಶವಾಗಿದೆ. ಎಂ.ಎಫ್.ಎಫ್ ಗಳ ಕಾರ್ಯನಿರ್ವಹಣೆಯ ಆಧಾರದ ಮೇಲೆ ಸಂಭಾವನೆ ನೀಡಲಾಗುವುದು.

ಮೇಲೆ ವ್ಯಕ್ತಪಡಿಸಿರುವುದಕ್ಕೆ ಒಳಪಟ್ಟಂತೆ ಈ ಇಬ್ಬರು ಪಕ್ಷಕಾರರ ನಡುವೆ ಮುಂದೆ ಸೂಚಿಸಿರುವ ಅಂಶಗಳಿಗೆ ಒಪ್ಪಂದದ ನಿವೇದನೆಯನ್ನು ಮಾಡಿಕೊಳ್ಳಲಾಗಿದೆ.

### ಒಪ್ಪಂದದ ಕಲಂ–1
### ಕಾರ್ಯಾಚರಣೆಯ ವ್ಯಾಪ್ತಿ

1.1 ಮೈಕ್ರೋ ಫೀಡರ್ ಫ್ರಾಂಚೈಸಿಗಳ ಕಾರ್ಯವ್ಯಾಪ್ತಿಯು ___________ ಜಿಲ್ಲೆಯ __________ ತಾಲ್ಲೂಕಿನ ____________ ಗ್ರಾಮ ಪಂಚಾಯಿತಿಯ ವ್ಯಾಪ್ತಿಗೆ ಒಳಪಡುವ ಎಲ್.ಟಿ–1 ಜಕಾತಿಯಿಂದ ಎಲ್.ಟಿ–4 ಜಕಾತಿಯವರೆಗೆ, ಎಲ್.ಟಿ–5 (40 ಹೆಚ್.ಪಿ ಸಾಮರ್ಥ್ಯದವರೆಗೆ) ಮತ್ತು ಎಲ್.ಟಿ–6 ಪ್ರವರ್ಗದ ಎಲ್ಲಾ ಗ್ರಾಹಕರ ಸ್ಥಾವರಗಳ ಮಾಪಕ ಓದುವಿಕೆ, ಬಿಲ್ ಸಿದ್ದಪಡಿಸಿ ವಿತರಿಸುವುದು ಮತ್ತು ಕಂದಾಯ ವಸೂಲಿ ಕೆಲಸಗಳನ್ನು ನಿಭಾಯಿಸಲು ಜವಾಬ್ದಾರಿ ವಹಿಸಲಾಗಿದೆ.

## ಒಪ್ಪಂದದ ಕಲಂ-2
## ಒಪ್ಪಂದದ ನಿವೇದನೆಯ ಅವಧಿ

2.1 ಈ ಒಪ್ಪಂದವು ನಿವೇದನೆಗೆ ಸಹಿ ಹಾಕಿದ ದಿನಾಂಕದಿಂದ ಒಂದು ವರ್ಷದ ಅವಧಿಗೆ ಜಾರಿಯಲ್ಲಿರುತ್ತದೆ.

2.2 ಎಂ.ಎಫ್.ಎಫ್ ಗಳ ಕಾರ್ಯಸಾಧನೆಗೆ ಸಂಬಂಧಿಸಿದ ಅಂಶಗಳನ್ನು ಅನುಬಂಧ-2 ರಲ್ಲಿ ಸೂಚಿಸಲಾಗಿದೆ.

## ಒಪ್ಪಂದದ ಕಲಂ-3
## ಎಂ.ಎಫ್.ಎಫ್ ಗಳ ಕಾನುನುಬದ್ಧ ಸ್ಥಾನಮಾನ

3.1 ಎಂ.ಎಫ್.ಎಫ್ ಆಗಿ ಕಾರ್ಯನಿರ್ವಹಿಸುವ ವ್ಯಕ್ತಿಯು _____ ವಿದ್ಯುತ್ ಸರಬರಾಜು ಕಂಪನಿಯ ಒಬ್ಬ ಏಜೆಂಟ್ ಆಗಿ ತನ್ನ ಕಾರ್ಯವ್ಯಾಪ್ತಿ ಪ್ರದೇಶದಲ್ಲಿ ಕಾರ್ಯನಿರ್ವಹಿಸಬೇಕಾಗುತ್ತದೆ ಮತ್ತು ಯಾವುದೇ ಕಾರಣಕ್ಕೂ ಆತನನ್ನು _____ ವಿದ್ಯುತ್ ಸರಬರಾಜು ಕಂಪನಿಯ ನೌಕರನೆಂದು ಪರಿಗಣಿಸಲಾಗುವುದಿಲ್ಲ.

3.2 ಎಂ.ಎಫ್.ಎಫ್ ಆಗಿ ಕಾರ್ಯನಿರ್ವಹಿಸುವ ವ್ಯಕ್ತಿಯು, ತನಗೆ ವಹಿಸಿರುವ ಕಾರ್ಯ ವ್ಯಾಪ್ತಿಯಲ್ಲಿ ತನ್ನ ಕಾರ್ಯನಿರ್ವಹಣೆಗಾಗಿ ತನ್ನ ಅಧೀನದಲ್ಲಿ ಉಪ ಏಜೆಂಟ್ / ಡೀಲರ್ ರನ್ನು ನೇಮಕ ಮಾಡಿಕೊಳ್ಳುವಂತಿಲ್ಲ.

## ಒಪ್ಪಂದದ ಕಲಂ-4
## ಜವಾಬ್ದಾರಿ

_____ ವಿದ್ಯುತ್ ಸರಬರಾಜು ಕಂಪನಿಯ ಜವಾಬ್ದಾರಿಗಳು:

4.1 ವಿದ್ಯುತ್ ಸರಬರಾಜು ಕಂಪನಿಯು:

4.1.1 ವಿದ್ಯುತ್ ಸರಬರಾಜು ಕೊರತೆ ಇದ್ದಾಗ ಎಂ.ಎಫ್.ಎಫ್ ಗಳಿಗೆ ಪಕ್ಷಪಾತ ಮಾಡಬಾರದು.

4.1.2 ಗ್ರಾಮ ಪಂಚಾಯಿತಿ ಅಥವಾ ತನ್ನ ಕಾರ್ಯವ್ಯಾಪ್ತಿಯ ಇನ್ಯಾವುದೇ ಪ್ರದೇಶದಲ್ಲಿ ಎಲ್ಲಾ ಕಾರ್ಯ ಮತ್ತು ಪಾಲನೆ ಚಟುವಟಿಕೆಗಳಿಗೆ ಜವಾಬ್ದಾರಿಯಾಗಿರುತ್ತದೆ.

4.1.3 ಮೈಕ್ರೋ ಫೀಡರ್ ಫ್ರಾಂಚೈಸಿಗಳಿಗೆ ಮಾಪಕ ಓದುವಿಕೆ, ಬಿಲ್ ತಯಾರಿಕೆ ಹಾಗೂ ಕಂದಾಯ ವಸೂಲಾತಿಗೆ ಸಂಬಂಧಿಸಿದಂತೆ, ಅವಶ್ಯವಾದ ಯಂತ್ರಾಂಶ ಸೌಲಭ್ಯಗಳನ್ನು ಒದಗಿಸತಕ್ಕದ್ದು.

ಮೈಕ್ರೋ ಫೀಡರ್ ಫ್ರಾಂಚೈಸಿಯ ಜವಾಬ್ದಾರಿಗಳು:

4.2 ಮೈಕ್ರೋ ಫೀಡರ್ ಫ್ರಾಂಚೈಸಿಯು:

4.2.1 ಎಲ್.ಟಿ-1, ಎಲ್.ಟಿ-2, ಎಲ್.ಟಿ-3, ಎಲ್.ಟಿ-4 (10 ಹೆಚ್.ಪಿ. ಗಿಂತ ಮೇಲ್ಪಟ್ಟ ಸ್ಥಾವರಗಳು), ಎಲ್.ಟಿ-5 (40 ಹೆಚ್.ಪಿ ಸಾಮರ್ಥ್ಯದವರೆಗೆ) ಮತ್ತು ಎಲ್.ಟಿ-6 ಪ್ರವರ್ಗದ ಸ್ಥಾವರಗಳ ಮಾಪಕ ಓದುವಿಕೆ, ಬಿಲ್ ವಿತರಣೆ ಮತ್ತು ಕಂದಾಯ ವಸೂಲಾತಿ ಮಾಡುವುದು.

4.2.2 ಗ್ರಾಹಕರಿಂದ ವಸೂಲು ಮಾಡಿದ ಹಣವನ್ನು ಅದೇ ದಿನ ಅಥವಾ ನಂತರದ ತಕ್ಷಣದ ಕೆಲಸದ ದಿನಾಂಕದಂದು ನಿಗದಿಪಡಿಸಿರುವ _____ ವಿದ್ಯುತ್ ಸರಬರಾಜು ಕಂಪನಿ ಕಛೇರಿ ಅಥವಾ ನಿಯುಕ್ತಿಗೊಳಿಸಿರುವ ಬ್ಯಾಂಕ್‌ನಲ್ಲಿ ಸಂದಾಯ ಮಾಡತಕ್ಕದ್ದು.

4.2.3 ದಿನವಹಿ ಮಾಪಕ ಓದುವಿಕೆಯನ್ನು ಪ್ರತಿ ತಿಂಗಳ 15ನೇ ದಿನಾಂಕದೊಳಗೆ ಪೂರ್ಣಗೊಳಿಸಬೇಕು ಹಾಗೂ ಮಾಪಕ ಓದಿದ ಸ್ಥಾವರಗಳ ವಿವರಗಳನ್ನು ಅದೇ ದಿನ ಸಿಸ್ಟಮ್ ಗೆ ಗಣಕಯಂತ್ರ (Computer) ನಲ್ಲಿ ಮಾಡಬೇಕು.

4.2.4 ಎಂ.ಎಫ್.ಎಫ್ ರವರು ತಾವು ನಿಯಮಿತವಾಗಿ ಮಾಡುವ ಮಾಪಕ ಓದುವಿಕೆ, ಬಿಲ್ ವಿತರಣೆ ಮತ್ತು ಕಂದಾಯ ವಸೂಲಾತಿ ಕಾರ್ಯಗಳಿಗೆ ಯಾವುದೇ ತೊಂದರೆ / ಅಡ್ಡಿಯಿಲ್ಲದ ರೀತಿಯಲ್ಲಿ ಗ್ರಾಹಕರ ಸ್ಥಾವರಗಳು, ಫೀಡರ್‌ಗಳು ಮತ್ತು ವಿತರಣಾ ಪರಿವರ್ತಕಗಳಿಗೆ ಮಾಪಕ ಅಳವಡಿಕೆ, ವಿತರಣಾ ಪರಿವರ್ತಕಗಳ ಮಾಪಕ ಓದುವಿಕೆ, ಗ್ರಾಹಕ ಸೂಚ್ಯಂಕ ಹಾಗೂ ಗ್ರಾಹಕರ ಸ್ಥಾವರಗಳಿಗೆ ವಿದ್ಯುತ್ ನಿಲುಗಡೆ ಮಾಡುವ ಕಾರ್ಯದಲ್ಲಿ ____ ವಿದ್ಯುತ್ ಸರಬರಾಜು ಕಂಪನಿಯೊಂದಿಗೆ ಸಹಕರಿಸುವುದು.

4.2.5 ವಿದ್ಯುತ್ ಸರಬರಾಜು ಸಂಬಂಧಿತ ದೂರುಗಳಿದ್ದಲ್ಲಿ, ಗ್ರಾಹಕರಿಗೆ ಸೇವಾ ಕೇಂದ್ರದ ದೂರವಾಣಿ ಸಂಖ್ಯೆಯನ್ನು ನೀಡುವುದು.

4.2.6 ಅನಧಿಕೃತ ವಿದ್ಯುತ್ ಸಂಪರ್ಕವನ್ನು ಸಕ್ರಮಗೊಳಿಸಲು ಸಹಕರಿಸುವುದು.

4.2.7 ಅಪಾಯಕಾರಿ ಸ್ಥಾವರಗಳ ಸ್ಥಳಗಳನ್ನು ಪತ್ತೆ ಹಚ್ಚಲು ಸಹಕರಿಸುವುದು.

4.2.8 ಹಳೆಯ/ ಹಾಳಾಗಿರುವ (MNR) ಮಾಪಕಗಳನ್ನು ಗುರುತಿಸಿ, ಉತ್ತಮ ಮಾಪಕಗಳಿಗೆ ಬದಲಾಯಿಸಲು ಅನುಕೂಲವಾಗುವಂತೆ ವರದಿಯನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಸಲ್ಲಿಸುವುದು.

4.2.9 ಬೀದಿ ದೀಪ ಮತ್ತು ಎಲ್.ಟಿ ಪ್ರವರ್ಗದ ನೀರು ಸರಬರಾಜು ಸ್ಥಾವರಗಳ ಮಾಪಕ ಓದುವುದು ಹಾಗೂ ಬಿಲ್ ವಿತರಿಸುವುದು.

4.2.10 ಬೀದಿ ದೀಪ, ನೀರು ಸರಬರಾಜು ಹಾಗೂ ನೀರಾವರಿ ಪಂಪ್‌ಸೆಟ್‌ಗಳಿಗೆಂದೇ ಮೀಸಲಿಟ್ಟ ವಿತರಣಾ ಪರಿವರ್ತಕಗಳ ಮಾಪಕಗಳ ಓದುವಿಕೆ ಹಾಗೂ ಮಾಪಕ ಓದುವಿಕೆಯಲ್ಲಿ ಯಾವುದೇ ವ್ಯತ್ಯಾಸಗಳು ಕಂಡುಬಂದಲ್ಲಿ ವರದಿಯನ್ನು ಉಪವಿಭಾಗ ಕಛೇರಿಗೆ ವರದಿ ಮಾಡುವುದು.

4.2.11 ಮೈಕ್ರೋ ಫೀಡರ್ ಫ್ರಾಂಚೈಸಿಗಳು, ತಮಗೆ ಒದಗಿಸಿರುವ ಗುರುತು ಪಟ್ಟಿ/ಬ್ಯಾಡ್ಜ್ ಧರಿಸಿ ಕಂಪನಿಯ ಕರ್ತವ್ಯ ನಿರ್ವಹಿಸತಕ್ಕದ್ದು. ಈ ಗುರತು ಪಟ್ಟಿ/ಬ್ಯಾಡ್ಜ್ ಅನ್ನು ಸುಸ್ಥಿಯಲ್ಲಿ ಇರಿಸಿಕೊಳ್ಳತಕ್ಕದ್ದು. ಈ ನಿಟ್ಟಿನಲ್ಲಿ ಒದಗಿಸಿರುವ ಅವಕಾಶಗಳನ್ನು ಮೈಕ್ರೋ ಫೀಡರ್ ಫ್ರಾಂಚೈಸಿಗಳು ದುರುಪಯೋಗಪಡಿಸಿಕೊಳ್ಳತಕ್ಕದ್ದಲ್ಲ.

4.2.12 ಯಾವುದೇ ಕಾರಣಕ್ಕೆ ಸ್ಥಾವರದ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿದಾಗ ಅಂತಹ ಸ್ಥಾವರದ ಮಾಪಕದಲ್ಲಿ ದಾಖಲಾಗಿರುವ ಅಂತಿಮ ರೀಡಿಂಗನ್ನು ಆರ್.ಆರ್ ಸಂಖ್ಯೆ ಅನುಸಾರ ದಾಖಲಿಸಿಕೊಂಡು, ಅನುಬಂಧ-1 ರ ನಮೂನೆಯ ಪ್ರಕಾರ ಮಾಹಿತಿಯನ್ನು ಸಲ್ಲಿಸುವುದು.

4.2.13 ವಿದ್ಯುತ್ ಸರಬರಾಜು ಕಂಪನಿಯು ಕಾಲ-ಕಾಲಕ್ಕೆ ಪ್ರಕಟಿಸುವ ವಿದ್ಯುತ್ ಸುರಕ್ಷತಾ ವಿಧಾನಗಳ ಕುರಿತು ಸಾಮಾನ್ಯ ಜನತೆಗೆ ಅರಿವು ಮೂಡಿಸುವುದು.

4.2.14 ಹೊಸ ವಿದ್ಯುತ್ ಸಂಪರ್ಕ ಪಡೆಯಲು ಇಚ್ಛಿಸುವ ಸಾರ್ವಜನಿಕರಿಗೆ ಸೂಕ್ತ ಸಹಾಯ/ಮಾರ್ಗದರ್ಶನ ನೀಡಿ, ವಿದ್ಯುತ್ ಸಂಪರ್ಕ ಪಡೆಯಲು ಅನುಸರಿಸಬೇಕಾದ ಕಂಪನಿಯ ನಿಯಮಗಳ ಬಗ್ಗೆ ಮಾಹಿತಿ ನೀಡುವುದು.

## ಒಪ್ಪಂದದ ಕಲಂ-5

## ಕಾರ್ಯಾಚರಣೆ ಅಂಶಗಳು

5.1 ____ ವಿದ್ಯುತ್ ಸರಬರಾಜು ಕಂಪನಿಯು ಪ್ರತಿ ಮೈಕ್ರೋ ಫೀಡರ್ ಫ್ರಾಂಚೈಸಿಗಳಿಗೆ ಒಂದು ಆಂಡ್ರಾಯ್ಡ್ ಸ್ಮಾರ್ಟ್ ಫೋನ್ / ಸ್ಪಾಟ್ ಬಿಲ್ಲಿಂಗ್ ಮಷೀನ್ (ಎಸ್.ಬಿ.ಎಂ) ನ್ನು ಒದಗಿಸುವುದು. ಆಂಡ್ರಾಯ್ಡ್ ಸ್ಮಾರ್ಟ್ ಫೋನ್ / ಸ್ಪಾಟ್ ಬಿಲ್ಲಿಂಗ್ ಮಷೀನನ್ನು ನಿರ್ವಹಿಸುವಲ್ಲಿ ಯಾವುದೇ ನಿರ್ಲಕ್ಷತೆ ತೋರಿ, ಕಳೆದು ಹೋದಲ್ಲಿ/ ನಿಷ್ಕ್ರಿಯವಾದಲ್ಲಿ ಸಂಪೂರ್ಣ ವೆಚ್ಚ / ದುರಸ್ತಿ ವೆಚ್ಚವನ್ನು ಸಂಬಂಧಪಟ್ಟ ಎಂ.ಎಫ್.ಎಫ್ ಭರಿಸಬೇಕು.

5.2 —— ವಿದ್ಯುತ್ ಸರಬರಾಜು ಕಂಪನಿಯು ಒಪ್ಪಂದದ ಅವಧಿಯಲ್ಲಿ ಎಂ.ಎಫ್.ಎಫ್ ರವರೊಂದಿಗೆ ಸಂಪರ್ಕ ಸಾಧಿಸಲು ನೋಡಲ್ ಅಧಿಕಾರಿಯನ್ನು ನೇಮಿಸಲಾಗುವುದು. ಎಂ.ಎಫ್.ಎಫ್ ರವರಿಗೆ ಒಪ್ಪಂದದಲ್ಲಿ ಯಾವುದೇ ವ್ಯಾಖ್ಯಾನವಿದ್ದಲ್ಲಿ ನೋಡಲ್ ಅಧಿಕಾರಿಯವರಿಂದ ಸ್ಪಷ್ಟೀಕರಣ ಪಡೆಯಬಹುದು. ನೋಡಲ್ ಅಧಿಕಾರಿಯು ಸೂಕ್ತ ವ್ಯಾಖ್ಯಾನ ಹಾಗೂ ನಿರ್ಧಾರ ಕೈಗೊಳ್ಳುವ ವಿಷಯಗಳ ಕುರಿತು ಎಂ.ಎಫ್.ಎಫ್ ರವರಿಗೆ ಸ್ಪಷ್ಟೀಕರಣ ನೀಡುವುದು.

5.3 ಆದರೆ, ನೋಡಲ್ ಅಧಿಕಾರಿಯು ಎಂ.ಎಫ್.ಎಫ್ ರವರ ಪ್ರತಿ ದಿನದ ಕಾರ್ಯವ್ಯಾಪ್ತಿ ನಿರ್ವಹಣೆ ವಿಷಯಗಳ ಬಗ್ಗೆ ವ್ಯವಹರಿಸಬಾರದು. ಅಂತಹ ವಿಷಯಗಳನ್ನು ಎಂ.ಎಫ್.ಎಫ್ ರವರು ತಮಗೆ ನೇಮಕ ಮಾಡಿರುವ ಕಾರ್ಯವ್ಯಾಪ್ತಿ ಅಧಿಕಾರಿಯೊಂದಿಗೆ ಚರ್ಚಿಸುವುದು.

5.4 ಈ ವಿಚಾರವಾಗಿ, ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ವಿಭಾಗ, --- ವಿ.ಕಂ ರವರನ್ನು ನೋಡಲ್ ಅಧಿಕಾರಿಯಾಗಿ ನೇಮಿಸಲಾಗಿದೆ.

5.5 ಎಂ.ಎಫ್.ಎಫ್ ರವರ ಕಾರ್ಯಚರಣೆ ವ್ಯಾಪ್ತಿಯಲ್ಲಿ ಯಾವುದೇ ಬದಲಾವಣೆಯಾದಲ್ಲಿ, ಒಪ್ಪಂದದ ನಿವೇದನ ಪತ್ರದಲ್ಲಿ ಕಡ್ಡಾಯವಾಗಿ ಅಳವಡಿಸುವುದು.

## ಒಪ್ಪಂದದ ಕಲಂ-6
## ವಾಣಿಜ್ಯಾತ್ಮಕ ಅಂಶಗಳು

6.1 ಮೈಕ್ರೋ ಫೀಡರ್ ಫ್ರಾಂಚೈಸಿಯವರು ಬ್ಯಾಂಕ್ ಖಾತ್ರಿಯನ್ನು ಸಲ್ಲಿಸುವುದು.

6.2 ಮೈಕ್ರೋ ಫೀಡರ್ ಫ್ರಾಂಚೈಸಿಯು —— ವಿದ್ಯುತ್ ಸರಬರಾಜು ಕಂಪನಿಯು ನಿಗದಿಪಡಿಸುವ ಗ್ರಾಮ ಪಂಚಾಯಿತಿ ಅಥವಾ ಇನ್ಯಾವುದೇ ಪ್ರದೇಶದಲ್ಲಿನ ಎಲ್.ಟಿ-1 (18 ಯೂನಿಟ್ ಗಳಿಗೆ ಮೇಲ್ಪಟ್ಟ ಸ್ಥಾವರಗಳು), ಎಲ್.ಟಿ-2, ಎಲ್.ಟಿ-3, ಎಲ್.ಟಿ-4 (10 ಹೆಚ್.ಪಿ. ಗಿಂತ ಮೇಲ್ಪಟ್ಟ ಸ್ಥಾವರಗಳು), ಎಲ್.ಟಿ-5 (40 ಹೆಚ್.ಪಿ ರವರೆಗೆ) ಮತ್ತು ಎಲ್.ಟಿ-6 ಪ್ರವರ್ಗಗಳ ಮಾಸಿಕ ಕಂದಾಯ ಬೇಡಿಕೆಯ ಶೇಕಡಾ 50 ರಷ್ಟು ಮೊತ್ತಕ್ಕೆ (ರೂ. 1,00,000/- ಗಳಿಗೆ ಮೀರದಂತೆ) ಬ್ಯಾಂಕ್ ಖಾತ್ರಿಯನ್ನು ನೀಡುವುದು. ಈ ಬ್ಯಾಂಕ್ ಖಾತರಿಯನ್ನು ಪಡೆದ ದಿನಾಂಕದಿಂದ 12+3=15 ತಿಂಗಳುಗಳ ಅವಧಿಗೆ ಊರ್ಜಿತದಲ್ಲಿರತಕ್ಕದ್ದು. ಸದರಿ ಬ್ಯಾಂಕ್ ಖಾತ್ರಿಯನ್ನು —— ವಿದ್ಯುತ್ ಸರಬರಾಜು ಕಂಪನಿಯ ಅವಶ್ಯಕತೆಯಂತೆ ವಿಸ್ತರಿಸಬಹುದಾಗಿದೆ. ಬ್ಯಾಂಕ್ ಖಾತ್ರಿಯನ್ನು ದುರುಪಯೋಗಪಡಿಸಿಕೊಂಡಲ್ಲಿ, ಎಂ.ಎಫ್.ಎಫ್‌ರವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು.

6.3 **ಕಾರ್ಯಸಾಧನೆ ಅಳತೆ ಮಾಡುವ ಅನುಕ್ರಮ:** ಈ ಒಪ್ಪಂದದ ಪ್ರಕಾರ, ನಿಗದಿಪಡಿಸಿರುವ ಮಾಪಕ ಓದುವುದು, ಬಿಲ್ ವಿತರಣೆ ಹಾಗೂ ಕಂದಾಯ ವಸೂಲಾತಿ ಗುರಿಯ ಆಧಾರದ ಮೇಲೆ ಮೈಕ್ರೋ ಫೀಡರ್ ಫ್ರಾಂಚೈಸಿಯು ವಸೂಲು ಮಾಡಿರುವ ಕಂದಾಯಕ್ಕೆ ಪ್ರೋತ್ಸಾಹ ಧನವನ್ನು ನೀಡಲಾಗುತ್ತದೆ. ಕಾರ್ಯಸಾಧನೆಯ ಗುತ್ತಿಗೆ ಷರತ್ತು ಹಾಗೂ ನಿಬಂಧನೆಗಳನ್ನು ಅನುಬಂಧ-2 ರಲ್ಲಿ ಒದಗಿಸಲಾಗಿದೆ.

6.4 **ಕಾರ್ಯಸಾಧನೆ ಮಾನದಂಡದ ಬದಲಾವಣೆ:** ಪ್ರಸ್ತುತ ವಿತರಣಾ ಪರಿವರ್ತಕಗಳಿಗೆ ಮಾಪಕವನ್ನು ಅಳವಡಿಸುವ ಕಾರ್ಯವನ್ನು ——ವಿ.ಕಂಪನಿಯು ಹಮ್ಮಿಕೊಂಡಿದೆ. ಪರಿವರ್ತಕಗಳಿಗೆ ಮಾಪಕಗಳನ್ನು ಅಳವಡಿಸಿದಲ್ಲಿ, ಈ ಕಾರ್ಯಸಾಧನೆ ಮಾನದಂಡವನ್ನು ವಸೂಲು ಮಾಡಿದ ಪ್ರಮಾಣದ ಬದಲು Input

Energy ಆಧಾರದಲ್ಲಿ ಮಾರ್ಪಾಡು ಮಾಡಲಾಗುವುದು. ಈ ನಿಟ್ಟಿನಲ್ಲಿ ___ವಿ.ಕಂಪನಿಯು ಕಾರ್ಯಸಾಧನೆ ಅಳತೆ ಹಾಗೂ ಪ್ರೋತ್ಸಾಹ/ದಂಡ ನೀಡಲು ಸೂಕ್ತ ವಿಧಾನವನ್ನು ರೂಪಿಸಲಾಗುವುದು.

6.5 **ಎಂ.ಎಫ್.ಎಫ್.ಗಳಿಗೆ ಪಾವತಿ:** ಎಂ.ಎಫ್.ಎಫ್ ಗಳಿಗೆ ಸಂಭಾವನೆಯನ್ನು ಈ ಒಪ್ಪಂದದ ಅನುಬಂಧ-2 ರಲ್ಲಿ ಸೂಚಿಸಿರುವ ನಿಗದಿತ ಮಾಪಕ ಓದುವಿಕೆ, ಬಿಲ್ ವಿತರಣೆ ಮತ್ತು ಕಂದಾಯ ವಸೂಲಾತಿ ಗುರಿಯ ಆಧಾರದಂತೆ ಪಾವತಿ ಮಾಡಲಾಗುವುದು.

6.6 **ಪಾವತಿಯ ಇತ್ಯರ್ಥ:** ಪ್ರತಿ ಕ್ಯಾಲೆಂಡರ್ ತಿಂಗಳ ಅಂತ್ಯದ ನಂತರದ 7 ದಿನಗಳೊಳಗೆ ಎಂ.ಎಫ್.ಎಫ್ ರವರಿಗೆ ಪಾವತಿಸಬೇಕಾದ ಪ್ರೋತ್ಸಾಹ ಧನವನ್ನು ಪಾವತಿಸುವುದು.

6.7 **ಉಪ ಏಜೆಂಟುಗಳು/ಡೀಲರ್ ಗಳ ನೇಮಕಾತಿಗೆ ನಿರ್ಬಂಧ:** ಎಂ.ಎಫ್.ಎಫ್ ಆಗಿ ಕಾರ್ಯನಿರ್ವಹಿಸುವ ವ್ಯಕ್ತಿಯು, ತನಗೆ ವಹಿಸಿರುವ ಕಾರ್ಯ ವ್ಯಾಪ್ತಿಯಲ್ಲಿ ತನ್ನ ಕಾರ್ಯನಿರ್ವಹಣೆಗಾಗಿ ತನ್ನ ಅಧೀನದಲ್ಲಿ ಉಪ ಏಜೆಂಟ್ / ಡೀಲರ್‌ಗಳನ್ನು ನೇಮಕ ಮಾಡಿಕೊಳ್ಳುವಂತಿಲ್ಲ. ಈ ರೀತಿಯ ನೇಮಕಾತಿ ಮಾಡಿರುವುದು ಗಮನಕ್ಕೆ ಬಂದಲ್ಲಿ, ಎಂ.ಎಫ್.ಎಫ್ ರವರನ್ನು ಯಾವುದೇ ನೋಟಿಸ್ ನೀಡದೇ ಅವರ ನೇಮಕಾತಿಯನ್ನು ರದ್ದುಪಡಿಸಲಾಗುವುದು.

6.8 ಎಂ.ಎಫ್.ಎಫ್ ರವರುಗಳು ಯಾವುದೇ ಸರ್ಕಾರಿ/ ಅರೆ ಸರ್ಕಾರಿ/ ಸ್ಥಳೀಯ ಸಂಸ್ಥೆ/ ರಾಜಕೀಯ ಸಂಸ್ಥೆಗಳಲ್ಲಿ ಯಾವುದೇ ಹುದ್ದೆ/ ಸ್ಥಾನ ಹೊಂದಿರತಕ್ಕದ್ದಲ್ಲ.

## ಒಪ್ಪಂದದ ಕಲಂ-7
## ಒಪ್ಪಂದದ ರದ್ದುಪಡಿಸುವಿಕೆ

7.1 **ನಿಷ್ಕಾರ್ಯತೆ ಸಂಬಂಧವಾಗಿ ಒಪ್ಪಂದವನ್ನು ರದುಪಡಿಸುವುದು:** ಈ ಒಪ್ಪಂದದ ಅವಧಿಯು ಒಂದು ವರ್ಷದ್ದಾಗಿರುತ್ತದೆ. ಈ ಒಪ್ಪಂದವನ್ನು ಯಾವುದೇ ಸಮಯದಲ್ಲಿ, ಎಂ.ಎಫ್.ಎಫ್ ರವರು ಒಪ್ಪಂದದ ನಿಯಮಗಳನ್ನು ಉಲ್ಲಂಘಿಸಿದಲ್ಲಿ ಅಥವಾ ಅತೃಪ್ತಿಕರ ಕಾರ್ಯನಿರ್ವಹಣೆ ಕಂಡುಬಂದಲ್ಲಿ ___ವಿ.ಕಂಪನಿಯು ಅಂತಹ ಎಂ.ಎಫ್.ಎಫ್ ನೊಂದಿಗೆ ಮಾಡಿಕೊಂಡಿರುವ ಒಪ್ಪಂದವನ್ನು ರದ್ದುಪಡಿಸಬಹುದಾಗಿದೆ. ಇಂತಹ ಅವಧಿ ಪೂರ್ವ ಒಪ್ಪಂದದ ರದ್ಧತಿಯಿಂದಾಗಿ ಸಂಬಂಧಪಟ್ಟ ಎಂ.ಎಫ್.ಎಫ್ ಗೆ ಯಾವುದೇ ಪರಿಹಾರ ನೀಡತಕ್ಕದ್ದಲ್ಲ.

7.2 **ಅಧಿಕ ವ್ಯಾಪ್ತಿಯ ಪ್ರದೇಶದಲ್ಲಿ ___ವಿ.ಕಂಪನಿಯು ತನ್ನ ಕಾರ್ಯಾಚರಣೆಯ ಜವಾಬ್ದಾರಿಯನ್ನು ಹೊರಗಿನ ಏಜೆನ್ಸಿಗೆ ಜವಾಬ್ದಾರಿ ವಹಿಸುವ ಪ್ರಕರಣಗಳಲ್ಲಿ ಒಪ್ಪಂದವನ್ನು ರದ್ದುಪಡಿಸುವುದು:** ___ ವಿದ್ಯುತ್ ಸರಬರಾಜು ಕಂಪನಿಯು ತನ್ನ ಕಾರ್ಯಾಚರಣೆ ವ್ಯಾಪ್ತಿಯಲ್ಲಿ ಎಂ.ಎಫ್.ಎಫ್ ಗಳಿಗೆ ವಹಿಸಿರುವ ಕಾರ್ಯನಿರ್ವಹಣಾ ಪ್ರದೇಶವು ಸೇರಿದಂತೆ, ಅಧಿಕ ವ್ಯಾಪ್ತಿಯ ಪ್ರದೇಶವನ್ನು ಹೊರಗಿನ ಏಜೆನ್ಸಿಗೆ ವಹಿಸಿದಲ್ಲಿ, ಅಂತಹ ಏಜೆನ್ಸಿಯೊಂದಿಗೆ ಒಪ್ಪಂದವನ್ನು ಮಾಡಿಕೊಂಡ ದಿನಾಂಕದಿಂದ ಎಂ.ಎಫ್.ಎಫ್ ನೊಂದಿಗೆ ಮಾಡಿಕೊಂಡಿದ್ದ ಒಪ್ಪಂದವು ರದ್ದುಗೊಳ್ಳುತ್ತದೆಯೆಂದು ಪರಿಗಣಿಸಲಾಗುವುದು. ಇಂತಹ ಅವಧಿ ಪೂರ್ವ ಒಪ್ಪಂದದ ರದ್ಧತಿಯಿಂದಾಗಿ ಸಂಬಂಧಪಟ್ಟ ಎಂ.ಎಫ್.ಎಫ್ ಗೆ ಯಾವುದೇ ಪರಿಹಾರ ನೀಡತಕ್ಕದ್ದಲ್ಲ.

7.3 **ಒಪ್ಪಂದವನ್ನು ರದ್ದುಪಡಿಸಲು ಪರಿಗಣಿಸುವ ಇತರೆ ಅಂಶಗಳು ಕೆಳಕಂಡಂತಿವೆ:**

7.3.1 ಗ್ರಾಹಕರಿಂದ ವಸೂಲು ಮಾಡಿದ ಹಣವನ್ನು ನಿಗದಿತ ಸಮಯದೊಳಗೆ ಸಂದಾಯ ಮಾಡದಿದ್ದಲ್ಲಿ ಒಪ್ಪಂದ ರದ್ದುಪಡಿಸಲಾಗುವುದು.

7.3.2 ಕಂದಾಯ ವಸೂಲಾತಿಯು ಸತತ ಯಾವುದೇ ಮೂರು ತಿಂಗಳಿನಲ್ಲಿ ನಿಗದಿತ ಮೂಲ ಗುರಿ (Baseline Target) ಗಿಂತ ಶೇಕಡಾ 10 ರಷ್ಟಕ್ಕಿಂತ ಕಡಿಮೆಯಾದಲ್ಲಿ ಒಪ್ಪಂದವನ್ನು ರದ್ದುಪಡಿಸಲಾಗುವುದು. ಕನಿಷ್ಠ ಸಮ್ಮತಿಸಿದ ಮೂಲ ಗುರಿಯನ್ನು ಈ ಒಪ್ಪಂದದ ಅನುಬಂಧ-2 ರಲ್ಲಿ ಸೂಚಿಸಿದೆ.

7.3.3 ಮೈಕ್ರೋ ಫೀಡರ್ ಫ್ರಾಂಚೈಸಿಯು ಈ ಒಪ್ಪಂದದ ಒಡಂಬಡಿಕೆಯಲ್ಲಿನ ಯಾವುದೇ ಷರತ್ತು ಹಾಗೂ ನಿಬಂಧನೆಗಳನ್ನು ಪಾಲಿಸಲು ಅಥವಾ ಅದರ ಪ್ರಕಾರ ಕಾರ್ಯನಿರ್ವಹಿಸಲು ವಿಫಲನಾಗಿದ್ದಾನೆ ಎಂದು __ವಿ.ಕಂಪನಿಯು ಅಭಿಪ್ರಾಯಪಟ್ಟಲ್ಲಿ, ಅಂತಹ ಎಂ.ಎಫ್.ಎಫ್ ಗೆ 30 ದಿನಗಳೊಳಗೆ ಅವನ/ಅವಳ ಕಾರ್ಯವಿಫಲತೆಯನ್ನು ಸರಿಪಡಿಸಿಕೊಳ್ಳುವಂತೆ ನೋಟೀಸನ್ನು ನೀಡಲಾಗುವುದು. ಅನಂತರವೂ ಎಂ.ಎಫ್.ಎಫ್ ಕಾರ್ಯನಿರ್ವಹಣೆಯಲ್ಲಿ ವಿಫಲರಾದಲ್ಲಿ ಅವರೊಂದಿಗೆ ಮಾಡಿಕೊಂಡಿರುವ ಒಪ್ಪಂದದ ಒಡಂಬಡಿಕೆಯನ್ನು ರದ್ದುಗೊಳಿಸಲಾಗುವುದು.

7.3.4 ತನ್ನ ಕಾರ್ಯನಿರ್ವಹಣೆಯ ಅವಧಿಯಲ್ಲಿ ಎಂ.ಎಫ್.ಎಫ್ ಪರಿಸಮಾಪ್ತಿಯಾಗಿ ದಿವಾಳಿಯಾದಲ್ಲಿ ಅಥವಾ ತನ್ನ ವ್ಯಾಪಾರ ವಹಿವಾಟನ್ನು ಪರಿಸಮಾನಗೊಳಿಸುವ ಹಂತ ತಲುಪಿದರೆ ರದ್ದುಪಡಿಸಲಾಗುವುದು.

7.3.5 ಒಪ್ಪಂದದ ಅವಧಿಯಲ್ಲಿ ಎಂ.ಎಫ್.ಎಫ್ __ವಿ.ಕಂಪನಿಯ ವಿರುದ್ಧವಾದ ಕಾರ್ಯಚಟುವಟಿಕೆಯಲ್ಲಿ ನಿರತನಾಗಿದ್ದರೆ, __ವಿ.ಕಂಪನಿಯನ್ನು ಅಥವಾ __ವಿ.ಕಂಪನಿಯ ಸೇವೆಯನ್ನು ದುರುಪಯೋಗ ಮಾಡಿಕೊಂಡಿದ್ದರೆ, ಯಾವುದೇ ಮುನ್ಸೂಚನೆ ನೀಡದೆ, ಅಂತಹ ಎಂ.ಎಫ್.ಎಫ್ ನೊಂದಿಗಿನ ಒಪ್ಪಂದವನ್ನು ರದ್ದುಪಡಿಸಲಾಗುವುದು.

7.4 ಇಂತಹ ರದ್ದುಪಡಿಸಿರುವ ಪ್ರಕರಣಗಳಲ್ಲಿ, __ವಿ.ಕಂಪನಿಯ ಇತರ ಹಕ್ಕುಬಾಧ್ಯತೆಗಳಿಗೆ ಚ್ಯುತಿ ಬಾರದಂತೆ, __ವಿ.ಕಂಪನಿಯು ಎಂ.ಎಫ್.ಎಫ್ ರವರು ಸಂಪಾದಿಸಿರುವ ಯಾವುದೇ ಪ್ರೋತ್ಸಾಹ ಧನವನ್ನು ಮುಟ್ಟುಗೋಲು ಹಾಕಿಕೊಳ್ಳಬಹುದಾಗಿದೆ. __ವಿ.ಕಂಪನಿಯ ಲೆಕ್ಕಗಳನ್ನು ಇತ್ಯರ್ಥಗೊಳಿಸಿದ ನಂತರವಷ್ಟೇ ಅಂತಹ ಪ್ರೋತ್ಸಾಹ ಧನವನ್ನು ಮರುಪಾವತಿಸಬಹುದಾಗಿದೆ.

7.5 ಎಂ.ಎಫ್.ಎಫ್ ರವರು ಒಪ್ಪಂದದ ನಿಯಮಗಳನ್ನು ಪಾಲಿಸುವಲ್ಲಿ ಅಥವಾ ವಾಣಿಜ್ಯ ಸೇವಾ ಪೂರಕ ಯೋಜನೆಯ ಪ್ರಕಾರ ಕಾರ್ಯನಿರ್ವಹಣೆಯಲ್ಲಿ ವಿಫಲನಾಗಿ ಅಥವಾ ಉಲ್ಲಂಘನೆ ಮಾಡಿದ್ದರಿಂದ, __ವಿ.ಕಂಪನಿಗೆ ಯಾವುದೇ ರೀತಿಯ ನಷ್ಟ, ವೆಚ್ಚ/ಖರ್ಚು ಉಂಟಾದಲ್ಲಿ, __ ವಿದ್ಯುತ್ ಸರಬರಾಜು ಕಂಪನಿಯು ಷರತ್ತುರಹಿತವಾಗಿ, ಅಂತಹ ಹಣವನ್ನು ಸಂಬಂಧಿತ ಎಂ.ಎಫ್.ಎಫ್ ನಿಂದ ವಸೂಲು ಮಾಡುವ ಹಕ್ಕು ಹೊಂದಿರುತ್ತದೆ.

7.6 ಯಾವುದೇ ಕಾರಣದಿಂದಾಗಿ ಎಂ.ಎಫ್.ಎಫ್ ನೊಂದಿಗಿನ ಒಪ್ಪಂದವು ರದ್ದುಗೊಂಡಲ್ಲಿ, ಕೂಡಲೇ ಎಂ.ಎಫ್.ಎಫ್ ತನ್ನ ಸುಪರ್ದಿಯಲ್ಲಿ ಹೊಂದಿರುವ __ವಿ.ಕಂಪನಿಗೆ ಸಂಬಂಧಿತ ದಾಖಲೆಗಳು, ಭಾಗಶಃ ಉಪಯೋಗಿಸಿದ/ಉಪಯೋಗಿಸಿಲ್ಲದ ರಸೀತಿ ಪುಸ್ತಕಗಳು, ನಮೂನೆಗಳು, ಆಂಡ್ರಾಯ್ಡ್ ಸ್ಮಾರ್ಟ್ ಫೋನ್ / ಸ್ಪಾಟ್ ಬಿಲ್ಲಿಂಗ್ ಮಷೀನ್ (ಎಸ್.ಬಿ.ಎಂ) ಹಾಗೂ ಇತರೆ ದಾಖಲಾತಿ/ಉಪಕರಣಗಳನ್ನು __ ವಿದ್ಯುತ್ ಸರಬರಾಜು ಕಂಪನಿಗೆ ಹಿಂತಿರುಗಿಸತಕ್ಕದ್ದು.

7.7 ಒಂದು ವೇಳೆ ಎಂ.ಎಫ್.ಎಫ್ __ ವಿದ್ಯುತ್ ಸರಬರಾಜು ಕಂಪನಿಯ ಯಾವುದೇ ದಾಖಲೆಗಳನ್ನು ನಕಲು ಮಾಡಿದಲ್ಲಿ ಅಥವಾ ದುರುಪಯೋಗ ಪಡಿಸಿಕೊಂಡಲ್ಲಿ ಹಾಗೂ __ ವಿ.ಕಂಪನಿಗೆ ನಷ್ಟ/ ಹಾನಿ ಮಾಡಿದಲ್ಲಿ, ಎಂ.ಎಫ್.ಎಫ್ ಗಳ ಮೇಲೆ ಕಾನೂನು ರೀತಿಯ ಕ್ರಮ ಕೈಗೊಳ್ಳುವುದಲ್ಲದೇ, ಬ್ಯಾಂಕ್ ಖಾತ್ರಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ ಹಕ್ಕು ಹೊಂದಿರುತ್ತದೆ.

7.8 ಎಂ.ಎಫ್.ಎಫ್ ರವರ ವಿರುದ್ಧ ಸಾರ್ವಜನಿಕರಿಂದ ದೂರು ಬಂದಲ್ಲಿ ಹಾಗೂ ___ ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯ ಉಪ-ವಿಭಾಗಾಧಿಕಾರಿವರ ವಿಚಾರಣೆಯಿಂದ ತಪ್ಪಿತಸ್ಥನೆಂದು ಸಾಬೀತಾದಲ್ಲಿ, ಒಪ್ಪಂದವನ್ನು ರದ್ದುಪಡಿಸಲಾಗುವುದು.

## ಒಪ್ಪಂದದ ಕಲಂ-8
## ವರದಿ ಮಾಡಿಕೊಳ್ಳುವ ವಿಧಾನಗಳು

8.1 ___ ವಿದ್ಯುತ್ ಸರಬರಾಜು ಕಂಪನಿಯು ಎಂ.ಎಫ್.ಎಫ್ ರವರು ನಿಯಮಿತವಾಗಿ ಅನುಬಂಧ-1 ರ ನಮೂನೆಗಳಲ್ಲಿ ವರದಿಯನ್ನು ಸಲ್ಲಿಸಲು ಅಧಿಕಾರಿಯನ್ನು ನೇಮಕ ಮಾಡುವುದು.

8.2 ಹೆಚ್ಚುವರಿಯಾಗಿ ವರದಿ ಮಾಡಬೇಕಾಗಿರುವ ನಮೂನೆಗಳನ್ನು ___ವಿ.ಕಂಪನಿಯು ಕಾಲ-ಕಾಲಕ್ಕೆ ಬದಲಾಯಿಸಬಹುದಾಗಿದೆ.

8.3 ಎಂ.ಎಫ್.ಎಫ್ ರವರು ತಮ್ಮ ಕಾರ್ಯನಿರ್ವಹಣೆಯನ್ನು ಸಮರ್ಥವಾಗಿ ನಿಭಾಯಿಸಲು ___ವಿ.ಕಂಪನಿಯು ಗ್ರಾಹಕರಿಗೆ ಸಂಬಂಧಿಸಿದ ಅವಶ್ಯ ಮಾಹಿತಿಗಳನ್ನು ಒದಗಿಸುವುದು.

8.4 ___ವಿ.ಕಂಪನಿಯು ಒದಗಿಸುವ ದಾಖಲೆಗಳಿಗೆ, ಎಂ.ಎಫ್.ಎಫ್ ರವರು ಕೇವಲ ಮೇಲ್ವಿಚಾರಕರಾಗಿರುತ್ತಾರೆ. ಈ ದಾಖಲೆಗಳನ್ನು ಮಾರ್ಪಾಡಿಸಿದಲ್ಲಿ ಅಥವಾ ಬದಲಾಯಿಸಿದಲ್ಲಿ, ಒಪ್ಪಂದದ ಉಲ್ಲಂಘನೆಯಾಗುತ್ತದೆ.

8.5 ತಾಂತ್ರಿಕವಾಗಿರಲಿ ಅಥವಾ ಭೌತಿಕವಾಗಿರಲಿ, ಈ ಒಪ್ಪಂದದ ಪ್ರಕಾರ ಎಂ.ಎಫ್.ಎಫ್ ನಿರ್ವಹಿಸುವ ಎಲ್ಲಾ ವ್ಯವಹರಣೆಗಳು, ದಾಖಲೆಗಳು, ವರದಿಗಳು, ಸಲ್ಲಿಸುವ ಮಂಡನೆಗಳು, ___ವಿ.ಕಂಪನಿಯ ಆಸ್ತಿಯಾಗುತ್ತವೆ. ಈ ಒಪ್ಪಂದದ ಪ್ರಕಾರ ಎಂ.ಎಫ್.ಎಫ್ ನಿಂದ ಅಭಿವೃದ್ಧಿಪಡಿಸಲ್ಪಟ್ಟ ಯಾವುದೇ ನಮೂನೆ, ಕ್ರಮಾನುಸರಣೆ ಇತರೆಗಳನ್ನು ಬಳಸಿಕೊಳ್ಳುವ ಹಕ್ಕು ___ವಿ.ಕಂಪನಿಯದ್ದಾಗಿರುತ್ತದೆ.

## ಒಪ್ಪಂದದ ಕಲಂ-9
## ನಷ್ಟ ಭರ್ತಿ

9.1 ___ವಿ.ಕಂಪನಿಯ ವಿದ್ಯುತ್ ಸರಬರಾಜು ಸೇವೆಗೆ ಸಂಬಂಧಿಸಿದಂತೆ, ಎಂ.ಎಫ್.ಎಫ್ ಗಳಿಗೆ ವಿಶೇಷವಾಗಿ ಅಧಿಕೃತಪಡಿಸಿಲ್ಲದ ಸಂದರ್ಭದಲ್ಲಿ ಎಂ.ಎಫ್.ಎಫ್ ಗಳು ತಾವಾಗಿಯೇ ಮಾಡುವ ತಪ್ಪು-ಒಪ್ಪುಗಳಿಗೆ ___ವಿ.ಕಂಪನಿಯ ಹೊಣೆಯಾಗುವುದಿಲ್ಲ. ಅಂತಹ ಪ್ರಕರಣಗಳಲ್ಲಿ ಎಂ.ಎಫ್.ಎಫ್ ಗಳು ___ವಿ.ಕಂಪನಿಯಿಂದ ಯಾವುದೇ ರೀತಿಯ ಪರಿಹಾರ, ಪ್ರೋತ್ಸಾಹ ಧನ ಅಥವಾ ಇತರೆ ಯಾವುದೇ ಪರಿಹಾರ ಕೇಳಲು ಅರ್ಹರಾಗಿರುವುದಿಲ್ಲ. ಒಂದು ವೇಳೆ ಯಾವುದೇ ಮೂರನೇ ವ್ಯಕ್ತಿಯು ಪರಿಹಾರ ಕೇಳಿದಲ್ಲಿ, ಅಂತಹ ಪ್ರಕರಣಗಳಲ್ಲಿ ಸಂಬಂಧಿತ ಎಂ.ಎಫ್.ಎಫ್ ರವರು ___ವಿ.ಕಂಪನಿಯನ್ನು ಸಮರ್ಥಿಸಿಕೊಳ್ಳುವುದರೊಂದಿಗೆ, ಉಂಟಾದ ಯಾವುದೇ ವೆಚ್ಚ/ಖರ್ಚುಗಳನ್ನು ಪಾವತಿಸುವುದು. ___ವಿ.ಕಂಪನಿಯು ಮೂರನೇ ವ್ಯಕ್ತಿಯೊಂದಿಗೆ ಪ್ರತಿವಾದಿಸಿದಲ್ಲಿ, ಅದಕ್ಕೆ ಉಂಟಾಗುವ ವೆಚ್ಚವನ್ನು ಎಂ.ಎಫ್.ಎಫ್ ರವರು ಭರಿಸಬೇಕು ಹಾಗೂ ಎಂ.ಎಫ್.ಎಫ್ ಒದಗಿಸಿರುವ ಬ್ಯಾಂಕ್ ಖಾತ್ರಿಯಲ್ಲಿ ಹೊಂದಾಣಿಕೆ ಮಾಡಿಕೊಳ್ಳಬಹುದಾಗಿದೆ.

9.2 ಮೇಲೆ ತಿಳಿಸಿರುವ ಪ್ರಕರಣಗಳಲ್ಲಿ, ಎಂ.ಎಫ್.ಎಫ್ ನ ಕಾರ್ಯನಿರ್ವಹಣೆಯ ಅವಧಿಯಲ್ಲಿ ___ವಿ.ಕಂಪನಿಗೆ ಮೌಲ್ಯ/ವೆಚ್ಚ/ಹಾಳಾಗುವುದು ಅಥವಾ ಯಾವುದೇ ರೀತಿಯ ನಷ್ಟ/ಆರ್ಥಿಕ ಹೊಣೆಗಾರಿಕೆ/ಸಂಕಷ್ಟ/ಸಂದಿಗ್ಧ ಪರಿಸ್ಥಿತಿ ಉಂಟಾದರೆ ___ವಿ.ಕಂಪನಿಗೆ ನಷ್ಟ ಭರಿಸುವುದಾಗಿ ಮುಚ್ಚಳಿಕೆ ನೀಡತಕ್ಕದ್ದು. ಎಂ.ಎಫ್.ಎಫ್ ನ

ಯಾವುದೇ ರೀತಿಯ ತಪ್ಪು-ಒಪ್ಪುಗಳಿಗೆ ___ವಿ.ಕಂಪನಿಯು ಹೊಣೆಗಾರಿಕೆ ಅಥವಾ ಜವಾಬ್ದಾರಿತನ ಹೊರತಕ್ಕದ್ದಲ್ಲ. ಅಪಘಾತ ಅಥವಾ ಇನ್ನಿತರ ಪ್ರಕರಣಗಳಲ್ಲಿ, ಎಂ.ಎಫ್.ಎಫ್ ಸ್ವತಃ ತನ್ನ ವಿಮಾ ಸೌಲಭ್ಯದೊಂದಿಗೆ ಅವಶ್ಯ ಪ್ರಮಾಣದ ನಷ್ಟ ಭರ್ತಿ ಮುಚ್ಚಳಿಕೆಯನ್ನು ಸಲ್ಲಿಸತಕ್ಕದ್ದು.

ಒಪ್ಪಂದದ ಕಲಂ-10

ಪ್ರತಿಕೂಲ ಪರಿಸ್ಥಿತಿ

10.1 ದೈನಂದಿನ ಕರ್ತವ್ಯದ ನಿಯತ ಜವಾಬ್ದಾರಿಯ ಸೀಮಿತವನ್ನು ಹೊರತುಪಡಿಸಿ, ದೈವ ಸಂಕಲ್ಪ, ಯಾವುದೇ ಸರ್ಕಾರಿ ಸಂಸ್ಥೆಯ ಕೃತ್ಯ ಅಥವಾ ಸಾರ್ವಜನಿಕ ವ್ಯರತ್ವ, ಯುದ್ಧ, ದೊಂಬಿ, ಅಡ್ಡಿ-ಅಡಚಣೆ, ಹರತಾಳ, ಕಾರ್ಮಿಕರ ಇತರ ಕೃತ್ಯ, ತುರ್ತು ಸಂದರ್ಭ, ಅಪಘಾತ, ವಿದ್ಯುತ್/ಕಾರ್ಮಿಕ/ಸಾಮಗ್ರಿ ಕೊರತೆ ಅಥವಾ ಇತರೆ ಪ್ರತಿಕೂಲ ಸಂದರ್ಭ-ಪರಿಸ್ಥಿತಿ, ಈಗಾಗಲೇ ಉಂಟಾದ ಸಮಾನ ರೀತಿಯ ಅಥವಾ ಬೇರೆ ರೀತಿಯ ಪರಿಸ್ಥಿತಿ, ನಿಯಂತ್ರಣ ಮೀರಿದ ಸಂದರ್ಭಗಳಲ್ಲಿ ವಿದ್ಯುತ್ ಸರಬರಾಜು ಸೇವೆಯಲ್ಲಿ ವಿಫಲತೆ ಅಥವಾ ವಿಳಂಬಕ್ಕೆ ಬೆ.ವಿ.ಕಂಪನಿ ಅಥವಾ ಎಂ.ಎಫ್.ಎಫ್. ಗಳು ಜವಾಬ್ದಾರರಲ್ಲ.

ಒಪ್ಪಂದದ ಕಲಂ-11

ವಿವಾದ ನಿರ್ಣಯ

11.1 ವಾದ-ವಿವಾದ ಅಥವಾ ನಿಯಮ ಉಲ್ಲಂಘನೆ, ___ವಿ.ಕಂಪನಿ ಹಾಗೂ ಎಂ.ಎಫ್.ಎಫ್ ನಡುವಿನ ಒಪ್ಪಂದದ ರದ್ದುಪಡಿಸುವಿಕೆ ಅಥವಾ ಇತ್ಯರ್ಥಗೊಳಿಸುವಿಕೆಯನ್ನು ಇಬ್ಬರು ಪಕ್ಷಕಾರರ ಸಮಕ್ಷಮದಲ್ಲಿ ಒಡಂಬಡಿಕೆಯ ಮೂಲಕ ಪರಿಹರಿಸಿಕೊಳ್ಳತಕ್ಕದ್ದು.

11.2 ಒಂದು ವೇಳೆ ಮೇಲೆ ಸೂಚಿಸದ ರೀತ್ಯಾ ಪರಿಹಾರ ದೊರಕದಿದ್ದಲ್ಲಿ, ಸಂಬಂಧಿತ ಮುಖ್ಯ ಇಂಜಿನಿಯರ್ (ವಿ), ವಲಯ ಕಛೇರಿ, ___ವಿ.ಕಂ. ಇವರ ಮಧ್ಯಸ್ಥಿಕೆಯಲ್ಲಿ ಪರಿಹರಿಸಿಕೊಳ್ಳತಕ್ಕದ್ದು. ಈ ನಿಟ್ಟಿನಲ್ಲಿ ಮುಖ್ಯ ಇಂಜಿನಿಯರ್ (ವಿ), ವಲಯ ಕಛೇರಿ, ___ವಿ.ಕಂ. ಇವರ ನಿರ್ಣಯವೇ ಅಂತಿಮವಾಗಿರುತ್ತದೆ.

ಒಪ್ಪಂದದ ಕಲಂ-12

ಕಾನೂನು ಬದ್ಧತೆ

12.1 ನಿಯಮಗಳ ವ್ಯಾಖ್ಯಾನ, ಒಪ್ಪಂದದ ಅವಧಿ ಹಾಗೂ ಕಾರ್ಯಸಾಧನೆ ಇವುಗಳನ್ನು ಭಾರತೀಯ ಕಾನೂನಿನ ಪ್ರಕಾರ ರಚಿಸಿ ಚಾಲನೆಗೊಳಿಸತಕ್ಕದ್ದು ಹಾಗೂ ಇವು ಕರ್ನಾಟಕ ರಾಜ್ಯದ ________ ನ್ಯಾಯಾಲಯದ ಪರಿಮಿತಿಗೆ ಸೀಮಿತವಾಗಿದೆ. ಅನುಬಂಧ-1 ಮತ್ತು ಅನುಬಂಧ-2 ಈ ಒಪ್ಪಂದದ ಭಾಗಗಳಾಗಿವೆ.

ಕರಾರು ಪತ್ರಕ್ಕೆ ಎರಡೂ ಪಕ್ಷಕಾರರು ಮೇಲೆ ಸೂಚಿಸಿರುವ ವರ್ಷ, ತಿಂಗಳು, ದಿನಾಂಕದಂದು ಸಹಿ ಹಾಕಿದ್ದಾರೆ.

ಕಂಪನಿ ಪರವಾಗಿ ಸಹಿ ಎಂ.ಎಫ್.ಎಫ್ ಸಹಿ

ಸಾಕ್ಷಿಗಳು: ಸಾಕ್ಷಿಗಳು:

## ಅನುಬಂಧ–2

## ಎಂ.ಎಫ್.ಎಫ್ ಗಳಿಗೆ ಕಾರ್ಯಸಾಧನೆ ಸಂಬಂಧಿತ ಷರತ್ತುಬದ್ಧ ಒಪ್ಪಂದಗಳು

1. ಒಪ್ಪಂದವು ಜಾರಿಗೊಳ್ಳುವ ದಿನಾಂಕ:

1.1 ಮೈಕ್ರೋ ಫೀಡರ್ ಫ್ರಾಂಚೈಸಿ ಒಪ್ಪಂದಕ್ಕೆ ಸಹಿ ಮಾಡಿದ ಕ್ಷಣದಿಂದ ಕಾರ್ಯಸಾಧನೆ ಸಂಬಂಧಿತ ಷರತ್ತುಗಳು ಜಾರಿಗೆ ಬರುತ್ತವೆ. ಒಪ್ಪಂದದ ತಿದ್ದುಪಡಿಯನ್ನು ಹೊರತುಪಡಿಸಿ, ಈ ಷರತ್ತುಗಳು ಒಪ್ಪಂದದ ಪೂರ್ಣ ಅವಧಿಗೆ ಜಾರಿಯಲ್ಲಿರುತ್ತವೆ.

1.2 ಈ ಒಪ್ಪಂದದ ಒಡಂಬಡಿಕೆಗಳು __________ ದಿನಾಂಕದಿಂದ ಜಾರಿಗೆ ಬಂದಿದೆಯೆಂದು ಭಾವಿಸಲಾಗಿದ್ದು, ಜಾರಿಗೆ ಬಂದ ದಿನಾಂಕದಿಂದ ಇಬ್ಬರು ಪಕ್ಷಕಾರರೂ ಬದ್ಧರಾಗಿರುತ್ತಾರೆ.

2. ಮಾಸಿಕ ಮಾಪಕ ಓದುವುದು ಮತ್ತು ನಿಗದಿಪಡಿಸಿರುವ ಮೂಲ ವಸೂಲಿ ಗುರಿ

2.1.1 ಮೈಕ್ರೋ ಫೀಡರ್ ಫ್ರಾಂಚೈಸಿಯು, ____ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯ ಪ್ರದೇಶದಲ್ಲಿ ಸೂಚಿಸಿರುವ ದಿನಾಂಕಗಳಂದು ಎಲ್.ಟಿ–1, ಎಲ್.ಟಿ–2, ಎಲ್.ಟಿ–3, ಎಲ್.ಟಿ–4 (10 ಹೆಚ್.ಪಿ ಗಿಂತ ಮೇಲ್ಪಟ್ಟ ಸ್ಥಾವರಗಳು), ಎಲ್.ಟಿ–5 (40 ಹೆಚ್.ಪಿ ಸಾಮರ್ಥ್ಯದವರೆಗೆ) ಮತ್ತು ಎಲ್.ಟಿ–6 ಪ್ರವರ್ಗದ ಸ್ಥಾವರಗಳ ಮಾಪಕವನ್ನು ಓದಿ, ಬಿಲ್ ಸಿದ್ಧಪಡಿಸಿ, ಗ್ರಾಹಕರಿಗೆ ವಿತರಿಸುವುದು.

2.1.2 ಮಾಸಿಕ ಮೂಲ ವಸೂಲಾತಿ ಗುರಿ (Monthly Baseline collection target) ಪ್ರಮಾಣವನ್ನು ಎಂ.ಎಫ್.ಎಫ್ ರವರ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸಂಬಂಧಿಸಿದಂತೆ ಕೆಳಕಂಡಂತೆ ನಿಗದಿಪಡಿಸಲಾಗಿದೆ.

(ಅ) ಎಲ್.ಟಿ–1 (18 ಯೂನಿಟ್ ಗಳಿಗೆ ಮೇಲ್ಪಟ್ಟ ಸ್ಥಾವರಗಳು) ಹಾಗೂ ಎಲ್.ಟಿ–4, ಪ್ರವರ್ಗದ ಸ್ಥಾವರಗಳ ಶೇಕಡಾ 50 ರಷ್ಟು ಮಾಸಿಕ ಬೇಡಿಕೆ

(ಆ) ಎಲ್.ಟಿ–2, ಎಲ್.ಟಿ–3 ಹಾಗೂ ಎಲ್.ಟಿ–5 (40 ಹೆಚ್.ಪಿ ಸಾಮರ್ಥ್ಯದವರೆಗೆ) ಸ್ಥಾವರಗಳ ಶೇಕಡಾ 100 ರಷ್ಟು ಮಾಸಿಕ ಬೇಡಿಕೆ

2.1.3 ಪ್ರತಿ ತಿಂಗಳ ಮೂಲ ವಸೂಲಾತಿ ಗುರಿಯ ಸಾಧನೆಯನ್ನು ಸಹಾಯಕ ಲೆಕ್ಕಾಧಿಕಾರಿ/ ಲೆಕ್ಕಾಧಿಕಾರಿ (ಆಂತರಿಕ ಪರಿಶೋಧನೆ) ಇವರು ದೃಢೀಕರಿಸಿ, 7 ದಿನಗಳೊಳಗೆ ನಿರ್ಧರಿಸಬೇಕಾಗಿದೆ.

3. ಬಿಲ್ಲಿಂಗ್ ಕಾರ್ಯಾವರ್ತನ (**Billing Cycle**)

3.1 ಬಿಲ್ಲಿಂಗ್ ಕಾರ್ಯಾವರ್ತನದ ಅವಧಿಯನ್ನು ____ ವಿದ್ಯುತ್ ಸರಬರಾಜು ಕಂಪನಿಯು ಕಾಲ–ಕಾಲಕ್ಕೆ ನಿರ್ಧರಿಸುತ್ತದೆ.

4. ವಾಣಿಜ್ಯಾತ್ಮಕ ಷರತ್ತುಗಳು:

4.1 ಪ್ರೋತ್ಸಾಹ ಧನ:

4.1.1 ಪ್ರತಿ ತಿಂಗಳು ಎಲ್ಲಾ ಪ್ರವರ್ಗದ ಗ್ರಾಹಕರ ಮಾಪಕಗಳನ್ನು ಓದಿ, ಶೇಕಡಾ 100 ರಷ್ಟು ಬಿಲ್ ವಿತರಣೆ ಮಾಡಿ, ಅನುಬಂಧ–2 ರ ಕಂಡಿಕೆ 2.1.2 ರಲ್ಲಿ ನಿಗದಿಪಡಿಸಿರುವ ಮಾಸಿಕ ಮೂಲ ಗುರಿಯನ್ನು ಸಾಧಿಸಿದಲ್ಲಿ ಮೈಕ್ರೋ ಫೀಡರ್ ಫ್ರಾಂಚೈಸಿಗೆ ರೂ. 12,000/– (ಹನ್ನೆರಡು ಸಾವಿರ ರೂಗಳು ಮಾತ್ರ) ವನ್ನು "ಕನಿಷ್ಠ ಖಚಿತ ಪ್ರೋತ್ಸಾಹ ಧನ" ವಾಗಿ ನೀಡಲಾಗುವುದು.

—— ವಿದ್ಯುತ್ ಸರಬರಾಜು ಕಂಪನಿಯು ಕಾಲ-ಕಾಲಕ್ಕೆ ನಿಗದಿಪಡಿಸುವ ಮಾಸಿಕ ಮೂಲ ವಸೂಲಿ ಗುರಿಯನ್ನು ಮೀರಿ ವಸೂಲಾತಿ ಪ್ರಮಾಣವನ್ನು ಸಾಧಿಸಿದಲ್ಲಿ ಹೆಚ್ಚುವರಿ ಪ್ರೋತ್ಸಾಹ ಧನವನ್ನು ಕೆಳಗಿನಂತೆ ಷರತ್ತುಗಳಿಗೆ ಒಳಪಟ್ಟಂತೆ ನೀಡಲಾಗುವುದು.

(ಅ) ಎಲ್.ಟಿ-1 (18 ಯೂನಿಟ್ ಗಳಿಗೆ ಮೇಲ್ಪಟ್ಟ ಸ್ಥಾವರಗಳು), ಎಲ್.ಟಿ-2, ಎಲ್.ಟಿ-3, ಎಲ್.ಟಿ-4 (10 ಹೆಚ್.ಪಿ. ಗಿಂತ ಮೇಲ್ಪಟ್ಟ ಸ್ಥಾವರಗಳು), ಎಲ್.ಟಿ-5 (40 ಹೆಚ್.ಪಿ ಸಾಮರ್ಥ್ಯದವರೆಗೆ) ಸ್ಥಾವರಗಳ ಪ್ರಸಕ್ತ ತಿಂಗಳಿನ ಬೇಡಿಕೆಯ ಶೇಕಡಾ 100 ರಷ್ಟು ವಸೂಲಾತಿ ಮಾಡಿದಲ್ಲಿ ಕನಿಷ್ಠ ಖಚಿತ ಪ್ರೋತ್ಸಾಹ ಧನದ ಜೊತೆಗೆ ರೂ. 2,000/- (ಎರಡು ಸಾವಿರ ರೂಗಳು ಮಾತ್ರ) ವನ್ನು ನೀಡಲಾಗುವುದು.

(ಆ) ಒಪ್ಪಂದದ ಅವಧಿ ಹೊರತುಪಡಿಸಿ, ಹಿಂದಿನ ದೀರ್ಘಾವಧಿ ವಿದ್ಯುತ್ ಕಡಿತಗೊಂಡ ಸ್ಥಾವರಗಳ ಒಟ್ಟು ಬಾಕಿ ಮೊತ್ತದ ಶೇಕಡಾ 50 ರಷ್ಟು ವಸೂಲಿ ಮಾಡಿದಲ್ಲಿ, ರೂ. 1,000/- (ಒಂದು ಸಾವಿರ ರೂಗಳು ಮಾತ್ರ) ನ್ನು ಹೆಚ್ಚುವರಿ ಪ್ರೋತ್ಸಾಹ ಧನವನ್ನಾಗಿ ನೀಡಲಾಗುವುದು.

(ಇ) ಒಪ್ಪಂದದ ಅವಧಿ ಹೊರತುಪಡಿಸಿ, ಹಿಂದಿನ ದೀರ್ಘಾವಧಿ ವಿದ್ಯುತ್ ಕಡಿತಗೊಂಡ ಸ್ಥಾವರಗಳ ಒಟ್ಟು ಬಾಕಿ ಮೊತ್ತದ ಶೇಕಡಾ 50 ರಿಂದ 100 ರವರೆಗೆ ಹೆಚ್ಚು ಮೊತ್ತವನ್ನು ವಸೂಲಿ ಮಾಡಿದಲ್ಲಿ, ರೂ. 1,500/- (ಒಂದು ಸಾವಿರ ಐನೂರು ರೂಗಳು ಮಾತ್ರ) ನ್ನು ಹೆಚ್ಚುವರಿ ಪ್ರೋತ್ಸಾಹ ಧನವನ್ನಾಗಿ ನೀಡಲಾಗುವುದು.

(ಹಾಲಿ ಎಂ.ಎಫ್.ಎಫ್ ರವರ ಒಪ್ಪಂದ ಅವಧಿಯಲ್ಲಿ ಸಂಗ್ರಹಿಸಿದ ಬಾಕಿ ಮೊತ್ತಕ್ಕೆ ಯಾವುದೇ ಪ್ರೋತ್ಸಾಹ ಧನ ನೀಡುವುದಿಲ್ಲ)

4.1.2 (ಅ) ಎಂ.ಎಫ್.ಎಫ್ ತನ್ನ ವ್ಯಾಪ್ತಿಯಲ್ಲಿನ ಎಲ್ಲಾ ಗ್ರಾಹಕರ ಎ.ಎಸ್.ಡಿ ನ್ನು ಮೂರು ತಿಂಗಳಲ್ಲಿ ವಸೂಲಿ ಮಾಡಿದಲ್ಲಿ, ರೂ. 500/- (ಐದು ನೂರು ರೂಗಳು ಮಾತ್ರ) ನ್ನು ಹೆಚ್ಚುವರಿ ಪ್ರೋತ್ಸಾಹ ಧನವನ್ನು ನೀಡಲಾಗುವುದು.

(ಆ) ಎಂ.ಟಿ. ವಿಭಾಗ / ಜಾಗೃತದಳದಿಂದ ವಿಧಿಸಿದ ಹಿಂಬಾಕಿ ಶುಲ್ಕ ವಸೂಲಾತಿ, ಇತರೆ ಯಾವುದೇ ಪರಿಶೋಧಿತ ಕಡಿಮೆ ಬೇಡಿಕೆ (Audit short claim) ಯಿಂದಾಗಿ ವಿಧಿಸಿದ ಹಿಂಬಾಕಿ ಶುಲ್ಕ ವಸೂಲಾತಿ, ಸರ್ಕಾರದ ಹೊಂದಾಣಿಕೆಗಳನ್ನು ಮೈಕ್ರೋ ಫೀಡರ್ ಫ್ರಾಂಚೈಸಿಗೆ ನೀಡಬೇಕಾದ ಪ್ರೋತ್ಸಾಹ ಧನ ಲೆಕ್ಕಾಚಾರಕ್ಕೆ ಪರಿಗಣಿಸಲಾಗುವುದಿಲ್ಲ.

(ಇ) ಹೆಚ್ಚುವರಿ ಪ್ರೋತ್ಸಾಹ ಧನವನ್ನು ಲೆಕ್ಕಿಸುವಾಗ ಒಪ್ಪಂದದ ಅವಧಿಯಲ್ಲಿ ಸಂಗ್ರಹಿಸಿರುವ ಬಾಕಿಯನ್ನು ಪರಿಗಣಿಸಲಾಗುವುದಿಲ್ಲ.

4.1.3 ಮೈಕ್ರೋ ಫೀಡರ್ ಫ್ರಾಂಚೈಸಿಗಳು ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸರಬರಾಜು ಮಾಡುವುದಕ್ಕಾಗಿಯೇ ಮೀಸಲಿಟ್ಟ ವಿತರಣಾ ಪರಿವರ್ತಕಗಳ ಮಾಪಕ ಓದಿದಲ್ಲಿ ಪ್ರತಿ ಸ್ಥಾವರಕ್ಕೆ ರೂ. 25/- (ಇಪ್ಪತ್ತೈದು ರೂಗಳು ಮಾತ್ರ) ನ್ನು ಪಾವತಿಸಲಾಗುವುದು.

4.1.4 ಮೈಕ್ರೋ ಫೀಡರ್ ಫ್ರಾಂಚೈಸಿಗಳು ಕುಡಿಯುವ ನೀರಿನ ಸ್ಥಾವರಗಳು ಮತ್ತು ಬೀದಿ ದೀಪ ಸ್ಥಾವರಗಳ ಮಾಪಕವನ್ನು ಓದಿದಲ್ಲಿ ಪ್ರತಿ ಸ್ಥಾವರಕ್ಕೆ ರೂ. 25/- (ಇಪ್ಪತ್ತೈದು ರೂಗಳು ಮಾತ್ರ) ನ್ನು ಪಾವತಿಸಲಾಗುವುದು.

4.1.5 ವಿತರಣಾ ಪರಿವರ್ತಕಗಳಿಗೆ ಮಾಪಕವನ್ನು ಅಳವಡಿಸಿದಲ್ಲಿ, ಕಾರ್ಯಸಾಧನೆ ಮಾನದಂಡವನ್ನು Input Energy ಆಧಾರದಲ್ಲಿ ಮಾರ್ಪಾಡು ಮಾಡಲಾಗುವುದು. ಈ ನಿಟ್ಟಿನಲ್ಲಿ ___ವಿ.ಕಂಪನಿಯು ಕಾರ್ಯಸಾಧನೆ ಅಳತೆ ಹಾಗೂ ಪ್ರೋತ್ಸಾಹ/ದಂಡ ನೀಡಲು ಸೂಕ್ತ ವಿಧಾನವನ್ನು ರೂಪಿಸಿ, ಅದರಂತೆ ಪ್ರೋತ್ಸಾಹ ಧನವನ್ನು ನಿಗದಿಪಡಿಸಲಾಗುವುದು.

4.1.6 ಮೈಕ್ರೋ ಫೀಡರ್ ಫ್ರಾಂಚೈಸಿಯು ಮಾಪಕ ಓದುವ ಸಮಯದಲ್ಲಿ ಪತ್ತೆಹಚ್ಚುವ ಅನಧಿಕೃತ/ ವಿದ್ಯುತ್ ಕಳ್ಳತನದ ಪ್ರಕರಣಗಳನ್ನು ಶಾಖಾಧಿಕಾರಿಯವರಿಗೆ ವರದಿ ಮಾಡಿದಲ್ಲಿ, ರೂ. 150/- (ಒಂದು ನೂರ ಐವತ್ತು ರೂಗಳು ಮಾತ್ರ) ರ ಪ್ರೋತ್ಸಾಹ ಧನವನ್ನು ನೀಡಲಾಗುವುದು.

4.1.7 ಮೈಕ್ರೋ ಫೀಡರ್ ಫ್ರಾಂಚೈಸಿಯು ಅನಧಿಕೃತ ನೀರಾವರಿ ಪಂಪ್‌ಸೆಟ್‌ಗಳು ಹಾಗೂ ಕುಡಿಯುವ ನೀರಿನ ಸ್ಥಾವರಗಳನ್ನು ಸಕ್ರಮಗೊಳಿಸಲು ಸಹಕರಿಸಿದಲ್ಲಿ, ಪ್ರತಿ ಸ್ಥಾವರಕ್ಕೆ ರೂ. 100/- (ಒಂದು ನೂರ ರೂಗಳು ಮಾತ್ರ) ರ ಪ್ರೋತ್ಸಾಹ ಧನವನ್ನು ಪಾವತಿಸಲಾಗುವುದು.

4.1.8 ಮೈಕ್ರೋ ಫೀಡರ್ ಫ್ರಾಂಚೈಸಿಯವರಿಗೆ Mobile Cash Collection (MCC) ಮೂಲಕ ಮಾಡುವ "ಪ್ರತಿ" ವ್ಯವಹಾರಕ್ಕೆ ಕೆಳಗಿನಂತೆ ಹೆಚ್ಚುವರಿ ಪ್ರೋತ್ಸಾಹ ಧನವನ್ನು ನೀಡಲಾಗುವುದು.

(ಅ) ಒಟ್ಟು ಸ್ಥಾವರಗಳಲ್ಲಿ ಶೇಕಡಾ 25 ರಿಂದ ಶೇಕಡಾ 50 ರವರೆಗೆ ನೀಡಿದ ಪ್ರತಿ ರಸೀದಿಗೆ ರೂ. 1.00/- ರಷ್ಟು ಮೊತ್ತವನ್ನು ಎಂ.ಎಫ್.ಎಫ್ ಗೆ ಪಾವತಿಸಲಾಗುವುದು.

(ಆ) ಒಟ್ಟು ಸ್ಥಾವರಗಳಲ್ಲಿ ಶೇಕಡಾ 50 ರಿಂದ ಶೇಕಡಾ 75 ರವರೆಗೆ ನೀಡಿದ ಪ್ರತಿ ರಸೀದಿಗೆ ರೂ. 2.00/- ರಷ್ಟು ಮೊತ್ತವನ್ನು ಎಂ.ಎಫ್.ಎಫ್ ಗೆ ಪಾವತಿಸಲಾಗುವುದು.

(ಇ) ಒಟ್ಟು ಸ್ಥಾವರಗಳಲ್ಲಿ ಶೇಕಡಾ 75 ರಿಂದ ಶೇಕಡಾ 90 ರವರೆಗೆ ನೀಡಿದ ಪ್ರತಿ ರಸೀದಿಗೆ ರೂ. 2.50/- ರಷ್ಟು ಮೊತ್ತವನ್ನು ಎಂ.ಎಫ್.ಎಫ್ ಗೆ ಪಾವತಿಸಲಾಗುವುದು.

(ಈ) ಒಟ್ಟು ಸ್ಥಾವರಗಳಲ್ಲಿ ಶೇಕಡಾ 90 ರಷ್ಟಕ್ಕಿಂತ ಮೇಲ್ಪಟ್ಟು ನೀಡಿದ ಪ್ರತಿ ರಸೀದಿಗೆ ರೂ. 3.00/- ರಷ್ಟು ಮೊತ್ತವನ್ನು ಎಂ.ಎಫ್.ಎಫ್ ಗೆ ಪಾವತಿಸಲಾಗುವುದು.

4.1.9 ಮೈಕ್ರೋ ಫೀಡರ್ ಫ್ರಾಂಚೈಸಿಯನ್ನು ತನ್ನ ಮೂಲ ಗ್ರಾಮ ಪಂಚಾಯಿತಿಯಿಂದ ಬೇರೆ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ವರ್ಗಾವಣೆ ಮಾಡಿದಲ್ಲಿ, ರೂ. 3,000/- ಗಳನ್ನು One Time Payment ರೂಪದಲ್ಲಿ ನೀಡಲಾಗುವುದು.

4.1.10 ಮೈಕ್ರೋ ಫೀಡರ್ ಫ್ರಾಂಚೈಸಿಯು ಕಾರ್ಯನಿರ್ವಹಿಸುವ ಸಮಯದಲ್ಲಿ, ಮಾರಣಾಂತಿಕವಲ್ಲದ (Non-fatal) ಅಪಘಾತಕ್ಕೊಳಗಾದರೆ, ಮಾನವೀಯತೆಯ ದೃಷ್ಟಿಯಿಂದ ಗರಿಷ್ಠ ರೂ. 5000/- (ರೂ. ಐದು ಸಾವಿರಗಳು ಮಾತ್ರ) ಅಥವಾ ವೈದ್ಯಕೀಯ ವೆಚ್ಚ, ಯಾವುದು ಕಡಿಮೆಯೋ ಆ ಮೊತ್ತವನ್ನು ನೀಡಲಾಗುವುದು. ಒಂದು ವೇಳೆ ಮೈಕ್ರೋ ಫೀಡರ್ ಫ್ರಾಂಚೈಸಿಯು ಕಾರ್ಯನಿರ್ವಹಿಸುವ ಸಮಯದಲ್ಲಿ ಅಪಘಾತದಿಂದ ಮರಣ ಹೊಂದಿದರೆ, ರೂ. 2,00,000/- (ರೂ. ಎರಡು ಲಕ್ಷ ಮಾತ್ರ) ಗಳನ್ನು ಪರಿಹಾರವಾಗಿ ನೀಡಲಾಗುವುದು.

4.2 ದಂಡ:

4.2.1 (ಅ) ಮೈಕ್ರೋ ಫೀಡರ್ ಫ್ರಾಂಚೈಸಿಯು ಶೇಕಡಾ 100 ರಷ್ಟು ಬಿಲ್ ವಿತರಿಸದಿದ್ದಲ್ಲಿ ಹಾಗೂ ಕನಿಷ್ಠ ಮೂಲ ವಸೂಲಾತಿ ಗುರಿಯನ್ನು ಸಾಧಿಸದಿದ್ದಲ್ಲಿ ಅವರಿಗೆ ನೀಡುವ ರೂ. 12,000/- ಗಳ ಕನಿಷ್ಠ ಖಚಿತ ಪ್ರೋತ್ಸಾಹ ಧನದಲ್ಲಿ ಶೇಕಡಾ 5 ರಷ್ಟನ್ನು ದಂಡದ ರೂಪದಲ್ಲಿ ವಿಧಿಸಿ, ಕಡಿತಗೊಳಿಸಲಾಗುವುದು.

(ಆ) ಒಂದು ವೇಳೆ ತಪ್ಪು ರೀಡಿಂಗ್ ನ್ನು ಸಲ್ಲಿಸಿದಲ್ಲಿ, ಒಪ್ಪಂದನ್ನು ರದ್ದುಪಡಿಸಲಾಗುವುದು ಹಾಗೂ ಎಂ.ಎಫ್.ಎಫ್ ರವರನ್ನು ಕಾರ್ಯವಿಮುಕ್ತಿಗೊಳಿಸಲಾಗುವುದು.

(ಇ) ಮೈಕ್ರೋ ಫೀಡರ್ ಫ್ರಾಂಚೈಸಿಯು ಬೀದಿ ದೀಪ ಹಾಗೂ ನೀರು ಸರಬರಾಜು ಸ್ಥಾವರಗಳ ಮಾಪಕವನ್ನು ಓದದಿದ್ದಲ್ಲಿ, ಪ್ರತಿ ಸ್ಥಾವರಕ್ಕೆ ರೂ. 20/- (ಇಪ್ಪತ್ತು ರೂಗಳು ಮಾತ್ರ) ರ ದಂಡವನ್ನು ವಿಧಿಸಿ, ಎಂ.ಎಫ್.ಎಫ್ ಗೆ ನೀಡಬೇಕಾದ ಪ್ರೋತ್ಸಾಹ ಧನದಲ್ಲಿ ಕಡಿತಗೊಳಿಸಲಾಗುವುದು.

(ಈ) ಮಾಪಕ ಓದಿದ ಸ್ಥಾವರಗಳ ವಿವರಗಳನ್ನು ಅದೇ ದಿನ ಗಣಕಯಂತ್ರ (Computer) ನಲ್ಲಿ ಅಪ್ಲೋಡ್ ಮಾಡದಿದ್ದಲ್ಲಿ, ಪ್ರತಿ ದಿನಕ್ಕೆ ರೂ. 10/- ರ ದಂಡವನ್ನು ವಿಧಿಸಲಾಗುವುದು.

(ಉ) ಮಾಪಕ ಓದುವಿಕೆಯನ್ನು ಪ್ರತಿ ತಿಂಗಳ 15ನೇ ದಿನಾಂಕದೊಳಗೆ ಪೂರ್ಣಗೊಳಿಸದಿದ್ದಲ್ಲಿ, ದಿನಾಂಕ 16 ರಿಂದ ಪ್ರತಿ ದಿನಕ್ಕೆ ರೂ. 100 ರ ದಂಡವನ್ನು ವಿಧಿಸಲಾಗುವುದು.

4.3 ಪಾವತಿ/ಲೆಕ್ಕ ಇತ್ಯರ್ಥಗೊಳಿಸುವಿಕೆ:-

4.3.1 ___ ವಿದ್ಯುತ್ ಸರಬರಾಜು ಕಂಪನಿಯು ನಿಯುಕ್ತಿಗೊಳಿಸಿದ ಅಧಿಕಾರಿಯು ಎಂ.ಎಫ್.ಎಫ್ ರವರಿಗೆ ಪ್ರತಿ ಕ್ಯಾಲೆಂಡರ್ ತಿಂಗಳು ನೀಡಬೇಕಾದ ಪ್ರೋತ್ಸಾಹ ಧನದ ವಿವರವನ್ನು ದೃಢೀಕರಿಸಬೇಕು. ___ ವಿದ್ಯುತ್ ಸರಬರಾಜು ಕಂಪನಿಯು ಎಂ.ಎಫ್.ಎಫ್ ರವರಿಗೆ ಪಾವತಿಸಬೇಕಾದ ಪ್ರೋತ್ಸಾಹ ಧನವನ್ನು ದೃಢೀಕರಿಸದ ದಿನಾಂಕದಿಂದ 7 ದಿನಗಳೊಳಗೆ ಪಾವತಿಸಬೇಕು.

4.3.2 ಮೈಕ್ರೋ ಫೀಡರ್ ಫ್ರಾಂಚೈಸಿಯು ತಮಗೆ ಪಾವತಿಸಬೇಕಾದ ಪ್ರೋತ್ಸಾಹ ಧನದ ಬಿಲ್ಲನ್ನು ನಿಗದಿತ ನಮೂನೆಯಲ್ಲಿ ಪ್ರತಿ ತಿಂಗಳ 3ನೇ ದಿನಾಂಕದೊಳಗೆ ಸಂಬಂಧಪಟ್ಟ ದಾಖಲೆಗಳೊಂದಿಗೆ ಸಲ್ಲಿಸುವುದು. ಒಂದು ವೇಳೆ ಪ್ರೋತ್ಸಾಹ ಧನದ ಬಿಲ್ಲನ್ನು ಸಲ್ಲಿಸಲು ವಿಳಂಬವಾದಲ್ಲಿ, ಪ್ರೋತ್ಸಾಹ ಧನದ ಪಾವತಿಯನ್ನು ಕೆಳಗಿನಂತೆ ಮುಂದೂಡಲ್ಪಡುತ್ತದೆ.

(ಅ) ಸೆಪ್ಟೆಂಬರ್ 2015 ನೇ ಮಾಹೆಯ ಪ್ರೋತ್ಸಾಹ ಧನದ ಬಿಲ್ಲನ್ನು 03-10-2015 ರಂದು ಸಲ್ಲಿಸಿದಲ್ಲಿ, ಪ್ರೋತ್ಸಾಹ ಧನವನ್ನು 07-10-2015 ರಂದು ಪಾವತಿಸಲಾಗುವುದು.

(ಆ) ಆಗಸ್ಟ್ 2015 ನೇ ಮಾಹೆಯ ಪ್ರೋತ್ಸಾಹ ಧನದ ಬಿಲ್ಲನ್ನು 03-10-2015 ರಂದು ಸಲ್ಲಿಸಿದಲ್ಲಿ, ಪ್ರೋತ್ಸಾಹ ಧನವನ್ನು 07-11-2015 ರಂದು ಪಾವತಿಸಲಾಗುವುದು.

(ಇ) ಜುಲೈ 2015 ನೇ ಮಾಹೆಯ ಪ್ರೋತ್ಸಾಹ ಧನದ ಬಿಲ್ಲನ್ನು 03-10-2015 ರಂದು ಸಲ್ಲಿಸಿದಲ್ಲಿ, ಪ್ರೋತ್ಸಾಹ ಧನವನ್ನು 07-12-2015 ರಂದು ಪಾವತಿಸಲಾಗುವುದು.

4.3.3 ಮೈಕ್ರೋ ಫೀಡರ್ ಫ್ರಾಂಚೈಸಿಯು ___ ವಿದ್ಯುತ್ ಸರಬರಾಜು ಕಂಪನಿಯ ಉಪ-ವಿಭಾಗ ಕಛೇರಿಯ ಸಹಾಯಕ ಲೆಕ್ಕಾಧಿಕಾರಿ/ ಹಿರಿಯ ಸಹಾಯಕ/ ಶಾಖಾಧಿಕಾಯವರಿಂದ ಶೇಕಡಾ 100 ರಷ್ಟು ಮಾಪಕ ಓದುವಿಕೆ, ಬಿಲ್ ವಿತರಣೆ ಹಾಗೂ ವಸೂಲಾತಿ (ಹಿಂಬಾಕಿ ಬಿಲ್ ಮೊತ್ತ, ಪರಿಶೋಧಿತ ಕಡಿಮೆ ಬೇಡಿಕೆ, ಜಾಗೃತದಳದಿಂದ ವಿಧಿಸಿದ ಹಿಂಬಾಕಿ ಶುಲ್ಕ ಇತರೆ ಶುಲ್ಕವನ್ನು ಹೊರತುಪಡಿಸಿ) ಯನ್ನು ದೃಢೀಕರಣ ಪತ್ರವನ್ನು ಪಡೆಯಬೇಕು.

4.3.4 ___ ವಿದ್ಯುತ್ ಸರಬರಾಜು ಕಂಪನಿಯ ಉಪ-ವಿಭಾಗ ಕಛೇರಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ.) ಎಂ.ಎಫ್.ಎಫ್ ರವರಿಗೆ ಪ್ರತಿ ತಿಂಗಳು ಪಾವತಿಸಬೇಕಾಗಿರುವ ಪ್ರೋತ್ಸಾಹ ಧನದ ವಿವರವನ್ನು ಮೇಲು ಸಹಿ ಮಾಡಬೇಕು. ಕಾರ್ಯನಿರ್ವಾಹಕ ಇಂಜಿನಿಯರ್ (ವಿ.)/ ಲೆಕ್ಕಾಧಿಕಾರಿ ಯವರು

ಎಂ.ಎಫ್.ಎಫ್ ರವರಿಗೆ ಪ್ರೋತ್ಸಾಹ ಧನವನ್ನು ಪ್ರತಿ ತಿಂಗಳ 7ನೇ ದಿನಾಂಕದೊಳಗೆ RTGS/NEFT ಮೂಲಕ ಪಾವತಿಸಲು ವ್ಯವಸ್ಥೆ ಮಾಡಬೇಕು.